ದಿನಾ ರಾಮು ಕೂಡುತ್ತಿದ್ದುದು ಆ ಜಾಗದಲ್ಲೇ. ಅವನ ಹತ್ತು ವರ್ಷದ ಜೀವನದಲ್ಲಿ ಅವನಿಗೆ ನೆನಪಿದ್ದಾಗಿನಿಂದಲೂ ಕೂತಿದ್ದುದು ಅಲ್ಲೇ. ಆದರೆ ಹಿಂದೆ, ತುಂಬಾ ವರ್ಷಗಳ ಹಿಂದೆ, ಅವನ ಅಪ್ಪ ಅದೇ ಜಾಗದಲ್ಲಿ ಜೊತೆಗೆ ಕೂಡುತ್ತಿದ್ದ. ಒಂದು ದಿನ, ಮುಂಬೈ ಮಹಾನಗರದಲ್ಲಿ ಕುರಿಗಳಂತೆ ಜನಗಳ ತುಂಬಿಸಿಕೊಂಡು ಓಡುವ ಸಬರ್ಬನ್ ಟ್ರೈನೊಂದರಿಂದ ಕಾಲು ಜಾರಿಬಿದ್ದು ಅವನು ತೀರಿಕೊಂಡ ಮೇಲೆ ರಾಮು ಒಂಟಿಯಾಗಿದ್ದ. ಬೆಳಿಗ್ಗೆ ಎಂಟು ಗಂಟೆಗೆ ತನ್ನ ಬ್ರಶ್, ಪಾಲಿಶ್ ಡಬ್ಬಿಗಳು, ಇತರ ಸಲಕರಣೆಗಳಿದ್ದ ಕಪ್ಪು ಬಣ್ಣ ತಿರುಗಿದ ಕೊಳಕು ಚೀಲವೊಂದರ ಜೊತೆಗೆ ಬಂದು ಇಲ್ಲಿ ಕೂತನೆಂದರೆ ಏಳುತ್ತಿದ್ದುದು ರಾತ್ರಿ ಎಂಟು ಗಂಟೆಗೇ. ಕೂತ ಕ್ಷಣದಿಂದ ಎದುರು ಸರಿದಾಡುವ ಕಾಲುಗಳ ಮೇಲೇ ಇವನ ನೆಟ್ಟ ನೋಟ. ಕಪ್ಪು, ಕಂದು, ಕಡುಕೆಂಪು, ಬಿಳಿ—ಅನೇಕ ಬಣ್ಣದ ಶೂಗಳು. ದೊಡ್ಡ ದೊಡ್ಡವು. ಪುಟಾಣಿ ಮಕ್ಕಳ ಸ್ಕೂಲಿನ ಶೂಗಳು, ಮಿರು ಮಿರುಗುಟ್ಟುವ ಜೊತೆಗಳು, ಹಳೆಯ ಚಿಂದಿಯಾದ ಜೊತೆಗಳು, ಕ್ಯಾನ್‌ವ್ಯಾಸ್, ಲೆದರ್, ಸ್ವೇಡ್, ತರಹ ತರಹ ಸಾಮಗ್ರಿಯಿಂದ ಮಾಡಿದುವು. ಮಧ್ಯೆ ಮಧ್ಯೆ ಒಂದು ಜೊತೆ ಶೂಗಳು ಇವನೆಡೆಗೆ ನಡೆದು ಬಂದು ನಿಂತಾಗ ಮೆಶೀನಿನಂತೆ ಬೇಗ ಬೇಗ ಫಳಫಳನೆ ಹೊಳೆಯುವಂತೆ ಪಾಲಿಶ್ ಮಾಡಿ ಮುಗಿಸುತ್ತಿದ್ದ ರಾಮು, ಆ ಪಾದಗಳಿಂದ ಮುಖದತ್ತ ದೃಷ್ಟಿ ಸರಿಯುತ್ತಿದ್ದುದು ಒಂದು ಕ್ಷಣ ಮಾತ್ರ. 'ಎಷ್ಟು ಕೊಡಬೇಕು?' ಸ್ವರ ಕೇಳಿದಾಗ, ಮಿಂಚಿನಂತೆ ತಲೆ ಎತ್ತಿ 'ನಿಮ್ಮ ಮರ್ಜಿ ಸಾಬ್' ಎಂದು ಹೇಳಿ ಮತ್ತೆ ಮತ್ತೆ ತಲೆತಗ್ಗಿಸುತ್ತಿದ್ದ ರಾಮು.

ಮಧ್ಯೆ ಮಧ್ಯೆ ಬಿಡುವಿನಲ್ಲಿ ತಲೆ ಎತ್ತಿ ನೋಡಿದರೆ ಎದುರುಗಡೆ ಗುಜು ಗುಜು ಗಲಾಟೆಯ ರಸ್ತೆ. ಕೆಂಪುಬಣ್ಣದ ಬಿ ಇ ಎಸ್ ಟಿ ಬಸ್‌ಗಳು, ಬಣ್ಣ ಬಣ್ಣದ ಕಾರುಗಳು, ಕಪ್ಪು—ಹಳದಿ ಟ್ಯಾಕ್ಸಿಗಳು, ಹಾತ್ ಗಾಡಿಗಳು— ವೇಗವಾಗಿ ಬಿಡುವಿಲ್ಲದ ವಾಹನ ಸಂಚಾರ—ಹಾರ್ನ್‌ಗಳ

'ಮಯೂರ'ದ 48 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. ಈ ನವಿಲುಗರಿಗಳು ಹಲವು ಓದುಗರ ನೆನಪುಗಳನ್ನು ಮಧುರವಾಗಿ ನೇವರಿಸುವುದಲ್ಲದೇ ಹೊಸ ಓದುಗರಿಗೆ ಹಳೆಯ ಬರಹಗಳ ಅಂದವನ್ನು ಪರಿಚಯಿಸುತ್ತವೆ. ಇದು, 1979ರ ನವೆಂಬರ್ ತಿಂಗಳ ಸಂಚಿಕೆಯಿಂದ ಆಯ್ದ ಬರಹ. ಚಿತ್ರ, ಚಂದ್ರನಾಥ ಆಚಾರ್ಯ ಅವರದು.